

ಸುಲ್ತಾನ್ ಮಸೀದಿ



ಚಹಾದಂಗಡಿ ಮುಂದೆ ಚದುರಂಗದಾಟ



ಬೆಟ್ಟದ ಮೇಲಿಂದ ಕಾಣುವ ಇಸ್ತಾನ್‌ಬುಲ್ ಸೊಬಗು

ಬರಕತ್ತಾಗಿಲ್ಲ. ಸಂಪ್ರದಾಯವಾದಿ ಸೌದಿಗೆ ಹೋಲಿಸಿದರೆ, ಜೋರ್ಡಾನ್, ಇಂಡೋನೇಶಿಯಾ, ಮಲೇಶಿಯಾ, ದುಬೈ, ಟರ್ಕಿ ಹೆಚ್ಚು ಆಧುನೀಕರಣಗೊಂಡಿವೆ. ಶತಮಾನಗಳ ಕಾಲ ಗ್ರೀಕ್ ಮತ್ತು ರೋಮನ್ನರ ಆಳಿಕೆಗೆ ಒಳಪಟ್ಟಿದ್ದರಿಂದಲೂ, ಯೂರೋಪಿನ ಜತೆಗಿನ ಭೌಗೋಳಿಕ ಸಾಮೀಪ್ಯದಿಂದಲೂ, ಟರ್ಕಿಯ ಮೈತುಂಬ ಪಾಶ್ಚಿಮಾತ್ಯ ನಾಗರಿಕತೆಯ ಗಾಢಮುದ್ರೆಗಳಿವೆ. ಅದರ ಆಧುನೀಕರಣದ ಹಿಂದೆ, ಒತ್ತೊಮನ್ ಚಕ್ರವರ್ತಿಯನ್ನು ಕೆಳಗಿಳಿಸಿ ಅಧಿಕಾರ ಹಿಡಿದ ಕೆಮಾಲ್ ಮುಸ್ತಫಾ ಪಾಶಾ (1920–1938) ಮಾಡಿದ ಕ್ಷಿಪ್ರಕ್ರಾಂತಿಯ ಕೈವಾಡವೂ ಇದೆ.

ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಕೆಮಾಲ್, ಟರ್ಕಿ ಸಮಾಜದಲ್ಲಿದ್ದ ಅತಿ ಧಾರ್ಮಿಕತೆಯನ್ನು ಕಠಿಣವಾಗಿ ನಿಯಂತ್ರಿಸಿ, ಅದನ್ನು ಜಾತ್ಯತೀತ ರಾಷ್ಟ್ರವಾಗಿ ಕಟ್ಟಲೆತ್ನಿಸಿದನು. ಟರ್ಕಿ ಭಾಷೆಗೆ ಬಳಸಲಾಗುತ್ತಿದ್ದ ಅರಬರ ನಶ್ಕ್ ಲಿಪಿಯನ್ನು ಕೈಬಿಟ್ಟು ಲ್ಯಾಟಿನ್ನಿಗೆ ಜಿಗಿಸಿದನು. ಹೀಗಾಗಿ ಟರ್ಕಿಯಲ್ಲಿ ಟರ್ಕಿಶ್ ಬಾರದೆಯೂ ಅದರ ಬೋರ್ಡುಗಳನ್ನು ಓದಬಹುದು. ಕಾಗುಣಿತ ಮಾತ್ರ ಪಕ್ಕಾ ಟರ್ಕಿಯದು: ಕೆ.ಎ.ಎ.ಎಫ್.ಐ=ಕಾಫಿ!

ಟರ್ಕರಿಗೆ ಇಂಗ್ಲೀಷಿಗಿಂತಲೂ ರಶ್ಯನ್ ಜರ್ಮನ್ ಅರಬ್ಬಿ ನುಡಿಗಳ ಒಡನಾಟ ಹೆಚ್ಚು. ನೊಬೆಲ್ ಪ್ರಶಸ್ತಿವಿಜೇತ ಲೇಖಕ ಒರ್ಹಾನ್ ಪಾಮುಕ್, ಆಧುನಿಕ ಟರ್ಕಿಯ ಉದಾರವಾದಿ ಜಾತ್ಯತೀತ ಪ್ರಜ್ಞೆಯ ಪ್ರತಿನಿಧಿ. ಈತನ ಬಗ್ಗೆ ಕೇಳಲು ನಮ್ಮ ಗೈಡ್ 'ಟರ್ಕಿಯನ್ನು ಟೀಕಿಸುವುದರಿಂದ ನೊಬೆಲ್ ಸಿಕ್ಕಿತು' ಎಂದು ವ್ಯಂಗ್ಯವಾಡಿದನು. ಪಾಮುಕನ ಅಪರಾಧವೆಂದರೆ, ಟರ್ಕಿಯ ಅಲ್ಪಸಂಖ್ಯಾತ ಜನಾಂಗ ಕುರ್ದಿಶರ ಸ್ವಾಯತ್ತತೆಯ ಹೋರಾಟವನ್ನು ಬೆಂಬಲಿಸಿದ್ದು ಮತ್ತು ಅವರ ಸರ್ಕಾರಿ ಹತ್ಯೆಯನ್ನು ಖಂಡಿಸಿದ್ದು. ಎಲ್ಲ ಧಾರ್ಮಿಕ ರಾಷ್ಟ್ರವಾದಗಳು ಒಳ ವಿಮರ್ಶಕರನ್ನು ಹಗೆಗಳಂತೆ ಕಾಣುತ್ತವೆ.

ವಿಶೇಷವೆಂದರೆ, ಟರ್ಕಿಯಲ್ಲಿ ಇಸ್ಲಾಮಿಕ್ ದೇಶಗಳಲ್ಲಿ ಕಾಣದ ಪ್ರತಿಮಾ ಸಂಸ್ಕೃತಿಯಿದೆ. ಕಡಲನ್ನು ದಿಟ್ಟಿಸುತ್ತ ಧೀರನಿಲುವಿನಲ್ಲಿ ನಿಂತ ಕೆಮಾಲನ ಪ್ರತಿಮೆಗಳು ಹೆಜ್ಜೆಹೆಜ್ಜೆಗಿವೆ. ಇವು ಇಸ್ಲಾಮಿ ಪರಂಪರೆಗೆ ವಿರುದ್ಧವಾಗಿವೆಯೆಂದೂ ಇವನ್ನು ನಿವಾರಿಸಬೇಕೆಂದೂ ಸಂಪ್ರದಾಯವಾದಿಗಳ ತಕರಾರು. ಇದಕ್ಕೆ ಬೇಕಾಗಿ ಟರ್ಕಿಯ ಅಧ್ಯಕ್ಷ ಎರ್ದೊಗನ್, ತುಸು ಬಲಪಂಥೀಯ. ಆದರೆ 'ಅತಾತುರ್ಕ್' (ರಾಷ್ಟ್ರಪಿತ) ಎನಿಸಿಕೊಂಡಿರುವ ಕೆಮಾಲನ ಅನುಯಾಯಿಗಳು ಈಗಲೂ ಇದ್ದಾರೆಯಾಗಿ, ಸರ್ಕಾರ ಪ್ರತಿಮೆಗಳನ್ನು ಉರುಳಿಸಲು ಮುಂದಾಗಿಲ್ಲ. ದೇಶದಲ್ಲಿ ಬಲಪಂಥೀಯರ ಬಲ ಹೆಚ್ಚುತ್ತಿದೆ. ಸರ್ಕಾರವು, ಇಸ್ತಾನ್‌ಬುಲ್‌ನ ಪ್ರಾಚೀನ ಸೋಫಿಯಾ ಚರ್ಚನ್ನು –ನಮ್ಮ ಭೇಟಿಯ ಕಾಲಕ್ಕದು ಮ್ಯೂಸಿಯಂ ಆಗಿತ್ತು– ಮಸೀದಿಯನ್ನಾಗಿಸಿದ್ದು, ಭವಿಷ್ಯದಲ್ಲಿ ಟರ್ಕಿ ಹಿಡಿಯಬಹುದಾದ ಪಥವನ್ನು ಸೂಚಿಸುತ್ತಿದೆ.

ಯೂರೋಪಿನ ದೇಶಗಳ ಜತೆ ಗಡಿ ಹಂಚಿಕೊಂಡಿರುವ ಟರ್ಕಿಯಲ್ಲಿ ಯಥೇಚ್ಛವಾಗಿ ಜನಾಂಗ ಮಿಶ್ರಣವಾಗಿದೆ. ಇದು ವಣಿಕಪಥದಲ್ಲಿ ಬರುವ ಶಹರಗಳ ಗುಣವೂ ಹೌದು. ಇಲ್ಲಿನ ತರುಣ–ತರುಣಿಯರು ರೋಮಿನ ಅಮೃತಶಿಲೆಯ ಶಿಲ್ಪಗಳಿಗೆ ಜೀವಬಂದು ನಡೆದಾಡುತ್ತಿರುವಂತೆ ಎತ್ತರದ ನಿಲುವುಳ್ಳವರು. ಗೋಧಿಬಣ್ಣ; ನೀಲಿ ಅಥವಾ ಬಿಳಿ